	ಶ್ರೇಣಿ	ನಿಗದಿ ಪಡಿಸಿದ ಗುರಿ	ಪೂರ್ಣ ಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭ ವಾಗದ ಮನೆಗಳು
ನಗರ ಆಶ್ರಯ	2000–2001	308	308	0	0
	2001–2002	268	268	0	0
	2002–2003	364	364	0	0
	2003–2004	322	322	0	0
	2005–2006	580	580	0	0
	2006–2007	ಗುರಿ ನಿಗದಿಪಡಿಸಿರುವುದಿಲ್ಲ			
	2007–2008				
	2008–2009				
	2009–2010				
ಒಟ್ಟು		**1842**	**1842**	**0**	**0**

ಅಲ್ಲದೆ, 2010–11ನೇ ಸಾಲಿನಿಂದ ನಗರ ಆಶ್ರಯ ಯೋಜನೆಯನ್ನು ವಾಜಪೇಯಿ ವಸತಿ ಯೋಜನೆಯೆಂದು ಮರು ನಾಮಕರಣ ಮಾಡಲಾಗಿದ್ದು, ಚಿತ್ರದುರ್ಗ ನಗರಕ್ಕೆ ಒಟ್ಟು 300 ಮನೆಗಳ ಗುರಿಯನ್ನು ಹಂಚಿಕೆ ಮಾಡಿ ಮಂಜೂರು ಮಾಡಲಾಗಿದೆ.

ಹನೂರಿನಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿ

28(50) ಶ್ರೀ ನರೇಂದ್ರ .ಆರ್ (ಹನೂರು) ಮಾನ್ಯ ವಿಧಾನಸಭಾ ಸದಸ್ಯರು:–ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಹನೂರು ಮತಕ್ಷೇತ್ರದಲ್ಲಿರುವ ಪ್ರವಾಸಿ ತಾಣಗಳಾದ ಭರಚುಕ್ಕಿ, ಶಿವನಸಮುದ್ರ ಮತ್ತು ಹೊಗೆನಕಲ್ ಪ್ರದೇಶಗಳು ಪ್ರೇಕ್ಷಣೀಯ ತಾಣಗಳಾಗಿದ್ದು, ಅವುಗಳನ್ನು ಅಭಿವೃದ್ಧಿಪಡಿಸಲು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು):–

ಅ)

1. ಭರಚುಕ್ಕಿ ಪ್ರದೇಶದಲ್ಲಿ ರೂ.431.85 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿವಿಧ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಯೋಜನೆಗೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿ ಮೊದಲ ಕಂತಾಗಿ ರೂ.345.48 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ಈ ಯೋಜನೆಯನ್ನು ಜಾರಿಗೊಳಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರಿಗೆ ವಹಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ಪಾಥ್, ವೇ/ಕರ್ಬ್, ರೈಲಿಂಗ್ಸ್, ಸ್ಟೆಪ್ಸ್, ಆಂಫಿ ಥಿಯೇಟರ್, ಸನ್‌ಶೇಡ್, ಮನರಂಜನಾ ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸಗಳು, ಫೆನ್ಸಿಂಗ್, ವಾಹನ ನಿಲ್ದಾಣ, ಸೈನೇಜಸ್, ಮಾಹಿತಿ, ಕಿಯಾಸ್ಕ್, ಶೌಚಾಲಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.
2. ಮಧ್ಯರಂಗದಲ್ಲಿರುವ ಶ್ರೀ ರಂಗನಾಥ ದೇವಾಲಯದ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿನಿವಾಸ ನಿರ್ಮಿಸಲಾಗುತ್ತಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
3. ಹೊಗೇನಕಲ್ ಜಲಪಾತ ಪ್ರದೇಶದಲ್ಲಿ ರೂ.100.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಾಹನ ನಿಲ್ದಾಣ, ಕಾಂಕ್ರೀಟ್ ಹಂತಗಳ ನಿರ್ಮಾಣ, ವೀಕ್ಷಣಾ ಗೋಪುರ, ಪರಗೋಲ, ನೀರಿನ ಟ್ಯಾಂಕ್ ನಿರ್ಮಾಣ, ಪಾಥ್ ವೇ, ಆಂತರಿಕ ರಸ್ತೆ ಮುಂತಾದ ಸೌಲಭ್ಯಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ಮೂಲಕ ಅಭಿವೃದ್ಧಿಪಡಿಸಲಾಗುತ್ತಿದೆ. ಕೆಲವು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
4. ಶಿವನಸಮುದ್ರದ ಬಳಿ ಇರುವ ಹಜ್ಹರತ್ ಮರ್ಧಾನ ಗೈವ್ ದರ್ಗಾ ಬಳಿ ರೂ.16.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಸೌಲಭ್ಯವನ್ನು ಕಲ್ಪಿಸಲು ಕ್ರಮ ವಹಿಸಲಾಗಿದೆ.
5. ಗೋಪಿನಾಥಂ ಪ್ರದೇಶದಲ್ಲಿ ರೂ.104.43 ಲಕ್ಷಗಳ ಅಂದಾಜು ವೆಚ್ಚದಲ್ಲಿ ಜಂಗಲ್ ಕ್ಯಾಂಪ್ಸ್ ಅಂಡ್ ಟ್ರಯಲ್ಸ್ ಯೋಜನೆಯನ್ನು ಅಭಿವೃದ್ಧಿಪಡಿಸಿ ಪೂರ್ಣಗೊಳಿಸಿ ಪ್ರವಾಸಿಗರಿಗೆ ತೆರೆಯಲಾಗಿದೆ.